ಇಂದಿನ ಊಟಕ್ಕೆ ಮನೆಯ ಅಳಿಯಂದಿರಿಗೆ ರಾಗಿಯ ಅಂಬಲಿಯೇ ಪ್ರಸಾದವಂತೆ!' ಎಂದನು. ಅರೆಬೆತ್ತಲೆಯ ಕುದುರೆ ಪ್ರಯಾಣದಿಂದ, ಹಸಿವಿನಿಂದ ಕಂಗಾಲಾಗಿದ್ದ ಅಯ್ನೋರು 'ಸದ್ಯ ಅಂಬಲಿಯಾದರೂ ಸಿಗುತ್ತದಲ್ಲ' ಎಂದುಕೊಂಡು ಮಾವನ ಮನೆಯ ಕಡೆಗೆ ಹೊರಟರು.

ಮನೆಗೆ ಬಂದವರೆ, ಷಡ್ಡಕರ ಜೊತೆ ಸೇರಿ ಹೊಟ್ಟೆ ಬಿರಿಯ ರಾಗಿ ಅಂಬಲಿ ಕುಡಿದರು. ಯಾರೂ ಮಾತನಾಡದೆ ಮಲಗಿದರು. ನಡುರಾತ್ರಿ ಅಯ್ನೋರಿಗೆ ಎಚ್ಚರವಾಯಿತು. ಹೊಟ್ಟೆ ಕಳೆದಂತಾಗಿ ಎರಡಕ್ಕೆ ಅವಸರವಾಯಿತು. ನಡುರಾತ್ರಿ ಹೊರಕ್ಕೆ ಹೋಗುವುದಕ್ಕೆ ಭಯ. ವಿಧಿಯಿಲ್ಲದೆ ನಾರಾಯಣನನ್ನು ಎಬ್ಬಿಸಿದರು. ನಾರಾಯಣ 'ಸ್ವಾಮಿ ಈ ನಡುರಾತ್ರಿಯಲ್ಲಿ ಎಲ್ಲಾದರೂ ಹೊರಕ್ಕೆ ಹೋಗುತ್ತಾರಾ? ಸುಮ್ಮನೆ ಅಲ್ಲಿ ಮೂರು ಕೊಂಬು ಇಟ್ಟಿದ್ದಾರೆ. ಅದರಲ್ಲಿ ಮುಗಿಸಿಕೊಂಡುಬಿಡಿ. ಬೆಳಿಗ್ಗೆ ಯಾರಿಗೂ ತಿಳಿಯದಂತೆ ನಾನೇ ಹೊಳೆಗೆ ತೆಗೆದುಕೊಂಡು ಹೋಗಿ ತೊಳೆದು ತಂದಿಡುತ್ತೇನೆ' ಎಂದ. ಅದಕ್ಕೆ ಅಯ್ನೋರು 'ಅಯ್ಯೋ ಮುಂಡೇದೆ! ಅದು ಈ ಮನೆ ಅಳಿಯಂದಿರು ಊದಲು ಇಟ್ಟಿರುವ ಕೊಂಬು. ಮಾವನ ಮನೆಗೆ ಬಂದ ಅಳಿಯಂದಿರು ಬೆಳಗಿನ ಪೂಜೆಯ ಸಮಯದಲ್ಲಿ ಈ ಕೊಂಬುಗಳನ್ನು ಊದಬೇಕು, ಗೊತ್ತಾ?' ಎಂದರು. ಆಗ ನಾರಾಯಣ 'ಸ್ವಾಮಿ, ಎಡಗಡೆಯಿಂದ ಮೊದಲ ಕೊಂಬು ನಿಮ್ಮದು ಅದನ್ನು ಬಿಟ್ಟು ಬಿಡಿ. ಉಳಿದ ಎರಡರಲ್ಲಿ ಕೊನೆಯದರಲ್ಲಿ ಮುಗಿಸಿಕೊಂಡುಬಿಡಿ. ಹೇಗೂ ಬೆಳಿಗ್ಗೆಯೇ ನಾನು ಅದನ್ನು ಖಾಲಿ ಮಾಡಿ ತೊಳೆದು ಇಡುತ್ತೇನಲ್ಲ. ಯಾರಿಗೂ ಗೊತ್ತಾಗುವುದಿಲ್ಲ' ಎಂದ. ಹೊಟ್ಟೆ ಕಿವುಚುವುದು ಹೆಚ್ಚಾದುದರಿಂದ ತಡೆಯದಾದ ಅಯ್ನೋರು ನಾರಾಯಣ ಹೇಳಿದ ಹಾಗೇ ಮಾಡಿ, ನಿರಾಳರಾಗಿ ಬಂದು ಮಲಗಿದರು. ಸ್ವಲ್ಪ ಹೊತ್ತಿನ ನಂತರ ಎರಡನೆಯ ಅಳಿಯನಿಗೂ ಹೊಟ್ಟೆ ಕಿವುಚು. ಆತನಿಗೂ ನಾರಾಯಣನೇ ಮೊದಲ ಕೊಂಬಿನ ದಾರಿ ತೋರಿಸಿದ. ನಂತರ ಮೂರನೆಯವನಿಗೆ ಮಧ್ಯದ ಕೊಂಬಿನ ದಾರಿ ತೋರಿಸಿ, ನಿರಾಳವಾಗಿ ಬಂದು ಮಲಗಿಕೊಂಡ ನಾರಾಯಣ ಸ್ವಲ್ಪ ಹೊತ್ತಿನಲ್ಲೇ ಗೊರಕೆ ಹೊಡೆಯಲಾರಂಭಿಸಿದ.

ಮಾರನೆಯ ದಿನ ಬೆಳಿಗ್ಗೆ ಮಾವ ಪೂಜೆ ಆರಂಭಿಸಿದರು. ಮೂವರೂ ಅಳಿಯಂದಿರಿಗೂ ಕೊಂಬು ಬಾರಿಸಿರೆಂದು ಕೈಭಾಷೆಯಲ್ಲೇ ಸೂಚಿಸಿದರು. ಮೂವರೂ ಅಳಿಯಂದಿರು, ತಮ್ಮ ತಮ್ಮ ಕೊಂಬು ಏನೂ ಆಗಿಲ್ಲ ಎಂಬ ನಂಬಿಕೆಯಿಂದ ಬಾಯಿಗಿಟ್ಟು ಊದಿದರು. ಕೊಂಬಿನಿಂದ ಶಬ್ದ ಬರುವುದರ ಬದಲು ಮನೆಯೆಲ್ಲಾ ಹೊಲಸು ಸಿಡಿದು ಗಬ್ಬು ವಾಸನೆ ಬರಲಾರಂಭಿಸಿತು. ಬರಿ ಗುಸುಗುಸು ಆಯಿತೇ ಹೊರತು, ಯಾರೂ ಗುಟ್ಟು ಬಿಟ್ಟುಕೊಡಲಿಲ್ಲ. ಕೊನೆಗೆ ಅಯ್ನೋರೆ ತಮ್ಮ ಮಾವನನನ್ನು ಒತ್ತಟ್ಟಿಗೆ ಕರೆದು ವಿಷಯ ತಿಳಿಸಿದರು. 'ಮೀಸೆ ತಲೆಕೂದಲಿಗಾಗಿ ಇಷ್ಟೊಂದು ಕಷ್ಟ ಪಡಬೇಕೆ? ಹೋದ ಕೂದಲು ಮತ್ತೆ ಬೆಳೆಯುವುದಿಲ್ಲವೆ?' ಎಂದು ನಾರಾಯಣನನ್ನು ಕರೆದು, ಉಪಾಯವಾಗಿ, ರಮಿಸಿ, ಮಾತನಾಡಿಸಿ, ಹೊಟ್ಟೆ ತುಂಬಾ ಪಾಯಸದ ಊಟ ಹಾಕಿಸಿ, ಕೆಲಸ ಬಿಟ್ಟು ಹೋಗಲು ಹೇಳಿದರು. ನಾರಾಯಣ 'ಸ್ವಾಮಿ, ಅಯ್ನೋರ ಮೀಸೆ ತಲೆಕೂದಲು ತೆಗೆಸಿ, ನನ್ನ ಬಾಬತ್ತು ಮೂವತ್ತು ಕಾಸು ಕೊಡದ ಹೊರತು ಕೆಲಸ ಬಿಡೊ ಬಾಬತ್ತೇ ಇಲ್ಲ' ಎಂದ. ವಿಧಿಯಿಲ್ಲದೆ ಅಯ್ನೋರು ಮೀಸೆ ಕೂದಲು ತೆಗೆಸಿದರು. ಮೂವತ್ತು ಕಾಸು ಕೊಟ್ಟರು. 'ಸೇರಿಗೆ ಸವ್ವಾಸೇರು' ಎಂದುಕೊಂಡು ನಾರಾಯಣ ಮತ್ತೆ ಅಣ್ಣನ ಬಳಿಗೆ ಹೊರಟ.

(ಅಜ್ಜ ಹೇಳಿದ ಕಥೆಯ ಸಂಗ್ರಹರೂಪ)

✤